ಅ)ಈ ಕೆಲಸವನ್ನು ಈ ವರ್ಷದ ಆಯವ್ಯಯದಲ್ಲಿ ಸೇರಿಸಲಾಗಿದೆಯೇ; ಈ ಕೆಲಸದ ಅಂದಾಜು ವೆಚ್ಚವೆಷ್ಟು;

ಇ)ಈ ಕೆಲಸವನ್ನುಈ ವರ್ಷವೇ ಪ್ರಾರಂಭಿಸಲಾಗುವುದೇ?

ಶ್ರೀ ವೀರ ಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ)ಇಲ್ಲ. ಬೆಳಗಾವಿ ಜಿಲ್ಲೆ ಬೈಲಹೊಂಗಲದಲ್ಲಿ ಒಂದು 110:33:11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಅವಶ್ಯಕವಾದ ಜಮೀನನ್ನು ಗುರುತಿಸಲಾಗಿದೆ. ಸದರಿ ಜಮೀನನ್ನು ಖರೀದಿಸಲು ಅವಶ್ಯಕವಾದ ಭೂ ಸ್ವಾಧೀನದ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಆದಷ್ಟು ಜಾಗ್ರತೆ ಖರೀದಿಸಲಾಗುವುದು.

ಆ)ಈ ಕಾಮಗಾರಿಯ ನಿರ್ವಹಣೆಗಾಗಿ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆದಿದ್ದು ಪ್ರಸಕ್ತ ವರ್ಷದ (2000-2001) ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಸೇರಿಸಲು ಯೋಚಿಸಿದೆ. ಈ ಕಾಮಗಾರಿಯ ಅಂದಾಜು ವೆಚ್ಚ ಸುಮಾರು 697.0 ಲಕ್ಷ ರೂ.

ಇ)ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ನಿಗಮದ ಕಾರ್ಪೊರೇಟ್ ಕಛೇರಿಯ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಕೊಂಡು ಹಾಗೂ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಆದಷ್ಟು ಜಾಗ್ರತೆ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ನಕಲು ಜಾತಿ ಪ್ರಮಾಣ ಪತ್ರಗಳ ವಂಚನೆ ಕುರಿತು

1419 (1827) ಶ್ರೀ ಮನೋಹರ ಕಟ್ಟಿಮನಿ (ಚಿಕ್ಕೋಡಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1)ರಾಜ್ಯದಲ್ಲಿ ನಕಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ದೃಢೀಕರಣ ಪತ್ರ ನೀಡಿ ಆಯ್ಕೆಯಾಗಿರುವ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಕೆಎಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು? (ಪೂರ್ಣ ಮಾಹಿತಿ ನೀಡುವುದು).

2)ಇವರುಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

3)ಕೆಎಎಸ್ ಅಧಿಕಾರಿ ಶ್ರೀ ವಿ. ಶಂಕರ್, ಎಂಬುವರ ವಿರುದ್ಧಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

1) ನಾಲ್ಕು ಜನ. ಅದರಲ್ಲಿ ಶ್ರೀ ಎಸ್.ಎಸ್. ಪೂಜಾರ್, ಕೆಎಎಸ್ (ಹಿರಿಯ ಶ್ರೇಣಿ) ಅಧಿಕಾರಿ, ಇವರು ಕಾಡುಕುರುಬ ಜನಾಂಗಕ್ಕೆ ಸೇರದಿದ್ದರೂ. ಕಾಡು ಕುರುಬ ಜನಾಂಗಕ್ಕೆ ಸೇರಿದವರೆಂದು ಸುಳ್ಳು ಜಾತಿಪ್ರಮಾಣ ಪತ್ರ ನೀಡಿರುವ ಆರೋಪಕ್ಕಾಗಿ ಅವರ ವಿರುದ್ಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಿಂದ ತನಿಖೆಗೆ ಕೈಗೊಳ್ಳಲಾಗಿದೆ.

(2) ಶ್ರೀ ವಿ. ಶಂಕರ್, ಕೆಎಎಸ್, ಹಿರಿಯ ಶ್ರೇಣಿ ಅಧಿಕಾರಿ ಇವರು ಮೂಲತಃ ಕುರುಬ ಜನಾಂಗಕ್ಕೆ ಸೇರಿದವರಾಗಿದ್ದು, ಕಾಡು ಕುರುಬ ಜನಾಂಗಕ್ಕೆ ಸೇರಿದವೆಂದು ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವ ಆರೋಪಕ್ಕಾಗಿ, ಅವರ ವಿರುದ್ಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಯುತ್ತಿದೆ.

(3) ಶ್ರೀ ರಾಮು, ಕೆಎಎಸ್, ಕಿರಿಯ ಶ್ರೇಣಿ ಅಧಿಕಾರಿ ಅವರು ಮೂಲತಃ ತಳವಾರ (ಹಿಂದುಳಿದ ಪಂಗಡ) ಜಾತಿಗೆ ಸೇರಿದ್ದರೂ, ನಾಯಕ (ಪರಿಶಿಷ್ಟ ಪಂಗಡ) ಜಾತಿಗೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರಿ ಸೇವೆಗೆ ಸೇರಿದ್ದಾರೆಂಬ ಆರೋಪಕ್ಕಾಗಿ ಅವರ ವಿರುದ್ಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಲಾಗುತ್ತಿದೆ.

(4) ಶ್ರೀ ಎಸ್.ವೈ. ಹೊಸಮನಿ, ಕೆಎಎಸ್, ಕಿರಿಯ ಶ್ರೇಣಿ ಅಧಿಕಾರಿ ಅವರು ಹಿಂದೂ ಅಂಬಿಗರ ಜಾತಿಗೆ ಸೇರಿದ್ದರೂ, ಪರಿಶಿಷ್ಟ ಪಂಗಡಕ್ಕೆ ಸೇರಿದ ಡೋರ್: ಕೋಳಿ ಜಾತಿಗೆ ನೀಡಿ ತಹಸೀಲ್ದಾರ್ ಹುದ್ದೆಗೆ ನೇಮಕಗೊಂಡಿದ್ದಾರೆಂಬ ಆರೋಪವಿದ್ದು, ಸದರಿ ಆರೋಪವನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ವಜಾ ಮಾಡಿರುತ್ತದೆಂದು ರಾಜ್ಯ ಅಭಿಯೋಜಕರು ವರದಿ ಮಾಡಿರುತ್ತಾರೆ.

2)ತನಿಖೆಯು ವಿವಿಧ ಹಂತಗಳಲ್ಲಿರುವುದರಿಂದ ತನಿಖಾ ಅಂತಿಮ ವರದಿ ಪಡೆದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

3)ಇಲ್ಲ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಬರಬೇಕಾದ ಆದಾಯ

1420 (1809) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಬರಬೇಕಾದ ಆದಾಯವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ)ಅಬಕಾರಿ ಇಲಾಖೆಯಲ್ಲಿ (ಸೆಕೆಂಡ್ಸ್) ಹಾವಳಿ ತಡೆಯಲು ಸರ್ಕಾರ ಕೈಗೊಂಡ ಕ್ರಮವೇನು?

ಇ)ರಾಜ್ಯದಲ್ಲಿ ಯಾವ ಪ್ರದೇಶಗಳಲ್ಲಿ ಸೆಕೆಂಡ್ಸ್ ಹಾವಳಿ ಈ ವರೆಗೆ ಎಷ್ಟು ಜನರ ಮೇಲೆ ಈ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ.

ಈ)ಪೋಲೀಸರು ಹಾಗೂ ಅಬಕಾರಿ ಇಲಾಖೆಯವರ ಮದ್ಯ ಸೆಕೆಂಡ್ಸ್ ಹಾವಳಿ ತಡೆಯಲು ಸಾಮರಸ್ಯ ಇಲ್ಲದಿರುವುದು ನಿಜವೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ)ಅಬಕಾರಿ ಇಲಾಖೆಗೆ ಸರ್ಕಾರವು 1999-2000ನೇ ಸಾಲಿನ ಆರ್ಥಿಕ ವರ್ಷಕ್ಕೆ 1200 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಲು ಆರ್ಥಿಕ ಗುರಿಯನ್ನು ನಿಗಧಿಪಡಿಸಿತ್ತು. ಅಬಕಾರಿ ಇಲಾಖೆಯು 1999-2000ನೇ ಸಾಲಿಗೆ ಸರ್ಕಾರವು ನಿಗಧಿಪಡಿಸಿರುವ ಗುರಿಯನ್ನು ಮೀರಿ 1231.33ಕೋಟಿ ರೂಪಾಯಿಗಳ ಆದಾಯವನ್ನು ಸಂಗ್ರಹಿಸಿರುತ್ತದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.